ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 11/07/2019

### ವಿಧಾನಸೌಧ ರಣಾಂಗಣ: ರಾಜೀನಾಮೆ ನೀಡಿದ ಸುಧಾಕರ್‌ಗೆ ಹಲ್ಲೆ, ದಿಗ್ಬಂಧನ
### ಸಚಿವ ಎಂಟಿಬಿ ಕೂಡಾ ರಿಸೈನ್ | ಮುಂಬಯಿಯಲ್ಲಿ ಡಿಕೆಶಿ ಹೈಡ್ರಾಮಾ
### ಕುಮಾರಸ್ವಾಮಿ ರಾಜೀನಾಮೆ ಚಿಂತನೆ | ಸಿದ್ದುಗೆ ಮುಖ್ಯಮಂತ್ರಿ ಪಟ್ಟ?

# ಕರ್‌ನಾಟಕ ಕುರುಕ್ಷೇತ್ರ

**ವಿಕ ಸುದ್ದಿಲೋಕ** ಬೆಂಗಳೂರು 11/7/19

ರಾಜ್ಯ ರಾಜಕೀಯ ಬುಧವಾರ ಸ್ಫೋಟಕ ತಿರುವನ್ನು ಪಡೆದಿದ್ದು, ಆಡಳಿತ ಶಕ್ತಿ ಕೇಂದ್ರವೇ ರಣಾಂಗಣವಾಗಿ ಪರಿವರ್ತನೆಗೊಂಡಿತು. ಅತ್ತ ಮುಂಬಯಿಯಲ್ಲಿರುವ ರೆಬೆಲ್ ಶಾಸಕರನ್ನು ಭೇಟಿ ಮಾಡಲು ತೆರಳಿದ ಟ್ರಬಲ್ ಶೂಟರ್ ಡಿ.ಕೆ. ಶಿವಕುಮಾರ್ ಅವರನ್ನೇ ಮುಂಬಯಿ ಪೊಲೀಸರು ವಶಕ್ಕೆ ತೆಗೆದುಕೊಳ್ಳುವ ಮೂಲಕ ಭಾರಿ ಹೈಡ್ರಾಮಾಕ್ಕೆ ಕಾರಣವಾಯಿತು. ಬುಧವಾರ ಇನ್ನೂ ಇಬ್ಬರು ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡಿದ್ದು ದೋಸ್ತಿಗಳು ಆಘಾತಕ್ಕೀಡಾದರು.

ಬುಧವಾರ ಸಂಜೆ ಕಾಂಗ್ರೆಸ್‌ನ ಎಂ.ಟಿ.ಬಿ. ನಾಗರಾಜ್ ಮತ್ತು ಡಾ.ಕೆ. ಸುಧಾಕರ್ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಹೊರಬರುತ್ತಿದ್ದಂತೆಯೇ ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್, ಸಚಿವ ಪ್ರಿಯಾಂಕ್ ಖರ್ಗೆ, ಮಾಜಿ ಸಚಿವ ನಸೀರ್ ಅಹ್ಮದ್ ಸುಧಾಕರ್ ಅವರ ಅಕ್ಷರಶಃ ಹಲ್ಲೆ ನಡೆಸಲು ಮುಂದಾದರು. ಜತೆಗೆ ಸುಧಾಕರ್ ಅವರನ್ನು ಮೂರನೇ ಮಹಡಿಗೆ ಎಳೆದೊಯ್ದು ಕೂಡಿ ಹಾಕಿದ್ದರಿಂದ ಬಿಜೆಪಿ ಹಾಗೂ ಕಾಂಗ್ರೆಸ್ ಮಧ್ಯೆ ಭಾರಿ ಸಂಘರ್ಷ ಉಂಟಾಯಿತು.

ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯಪಾಲರು ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಲೂಬಹುದು ಎಂದು ಹೇಳಲಾಗುತ್ತಿದೆ. ಇದರ ನಡುವೆಯೇ, ಸಿಎಂ ಕುಮಾರಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಸಿದ್ದರಾಮಯ್ಯ ಅವರಿಗೆ ಅಧಿಕಾರ ನೀಡುವ ಸೂತ್ರವೊಂದು ಸಿದ್ಧವಾಗಿರುವ ಸುದ್ದಿ ಹರಡಿದೆ. »10



ಸ್ಪೀಕರ್‌ಗೆ ರಾಜೀನಾಮೆ ನೀಡಿ ಹೊರಬಂದ ಶಾಸಕ ಸುಧಾಕರ್ ಅವರನ್ನು ಕಾಂಗ್ರೆಸ್ ಶಾಸಕರು ಹಿಡಿದಿಟ್ಟಿರುವುದು.

## ಸುಧಾಕರ್ ಎಳೆದೊಯ್ದ ಕೈ ನಾಯಕರು




ಶಾಸಕ ಡಾ. ಕೆ. ಸುಧಾಕರ್ ಅವರ ವಿಚಾರದಲ್ಲಿ ಕಾಂಗ್ರೆಸ್ ನಡೆದುಕೊಂಡ ರೀತಿ ವಿಧಾನಸೌಧ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗಿ ದಾಖಲಾಯಿತು. ರಾಜೀನಾಮೆ ಕೊಟ್ಟು ಸ್ಪೀಕರ್ ಕಚೇರಿಯಿಂದ ಹೊರ ಬರುತ್ತಿದ್ದ ಸುಧಾಕರ್‌ನ್ನು ಮೊದಲನೇ ಮಹಡಿಯಲ್ಲಿರುವ ಲಿಫ್ಟ್ ಬಳಿ ಎಂಎಲ್‌ಸಿ ನಸೀರ್ ಅಹ್ಮದ್ ತಡೆದರು. ಸಚಿವ ಪ್ರಿಯಾಂಕ ಖರ್ಗೆ ತಕ್ಷಣ ಸುಧಾಕರ್ ಕೊರಳಿಗೆ ಕೈಹಾಕಿ ಲಿಫ್ಟ್‌ನೊಳಗೆ ಎಳೆದುಕೊಂಡು ಹೋದರು. ವಿಧಾನ ಪರಿಷತ್ ಸದಸ್ಯ ರಿಜ್ವಾನ್ ಅರ್ಷದ್ ಜತೆಗೆ 3ನೇ ಮಹಡಿಯಲ್ಲಿರುವ ಸಚಿವ ಕೆ.ಜೆ. ಜಾರ್ಜ್ ಕೊಠಡಿಗೆ ಕರೆದೊಯ್ದರು. ಈ ನಡುವೆ, ಹಲ್ಲೆ, ನಿಂದನೆಗಳು ನಡೆದವು.

ಸುದ್ದಿ ತಿಳಿಯುತ್ತಿದ್ದಂತೆಯೇ ಬಿಜೆಪಿಯ ಕೆಲವು ಶಾಸಕರು ಸ್ಪೀಕರ್‌ಗೆ ದೂರು ನೀಡಿ 3ನೇ ಮಹಡಿಗೆ ಧಾವಿಸಿದರು. ಆದರೆ ಪೊಲೀಸರು ಪ್ರವೇಶ ನಿರಾಕರಿಸಿದರು. ತಾಳ್ಮೆ ಕಳೆದುಕೊಂಡ ಬಸವರಾಜ್ ಬೊಮ್ಮಾಯಿ ಜಾರ್ಜ್ ಕೊಠಡಿಯ ಬಾಗಿಲನ್ನು ಕಾಲಿನಿಂದ ಒದ್ದಾಗ, ಸಚಿವ ಪ್ರಿಯಾಂಕ್ ಖರ್ಗೆ ಹೊರ ಬಂದು ವಾಗ್ವಾದಕ್ಕೆ ಮುಂದಾದರು. ಇತ್ತ ಬಿಜೆಪಿಯ ಎಲ್ಲ ಶಾಸಕರು ಧಾವಿಸಿ ಜಾರ್ಜ್ ಕಚೇರಿ ಮುತ್ತಿಕೊಂಡರು. ಕಾಂಗ್ರೆಸ್ ಪಾಳಯದಿಂದಲೂ ಜಮಾವಣೆ ನಡೆಯಿತು. ಗುಂಪುಗಳು ವಾಗ್ವಾದದ ಜತೆ ಕೈಕೈ ಮಿಲಾಯಿಸಿಕೊಂಡವು.

25

### ದೋಸ್ತಿ ಬಲ 101ಕ್ಕೆ?

ಎಂಟಿಬಿ ನಾಗರಾಜ್ ಮತ್ತು ಸುಧಾಕರ್ ರಾಜೀನಾಮೆಯೊಂದಿಗೆ ದೋಸ್ತಿ ಸರಕಾರದ ಬಲ 101ಕ್ಕೆ ಇಳಿದಿದೆ. ಸ್ಪೀಕರ್ ಅವರು ಯಾವ ರಾಜೀನಾಮೆಯನ್ನೂ ತಿರಸ್ಕರಿಸಿಲ್ಲ ಎಂದು ಹೇಳಿದ್ದಾರೆ. ಗುರುವಾರ ಇನ್ನೂ ಕೆಲವು ಶಾಸಕರು ರಾಜೀನಾಮೆ ನೀಡುವ ಸಾಧ್ಯತೆ ಇದೆ. ಈ ನಡುವೆ, ಬಿಎಸ್‌ಪಿ ಶಾಸಕ ಎನ್. ಮಹೇಶ್ ಪ್ರತ್ಯೇಕ ಆಸನ ಕೇಳಿದ್ದಾರೆ. ಹೀಗಾಗಿ, ಒಟ್ಟಾರೆ ಸಂಖ್ಯಾ ಬಲ 100ಕ್ಕೆ ಇಳಿಯಲಿದೆ.

### ಗವರ್ನರ್ಸ್ ನಡೆಯೇನು?

- ಶಾಸಕರ ಮೇಲೆ ಹಲ್ಲೆ, ಮಾರಾಮಾರಿಯನ್ನು ಗಂಭೀರವಾಗಿ ಪರಿಗಣಿಸಿ ಕೇಂದ್ರ ಗೃಹ ಇಲಾಖೆಗೆ ವರದಿ ನೀಡಬಹುದು.
- ಮೈತ್ರಿ ಬಲ ಕುಸಿಯುತ್ತಿರುವುದರಿಂದ ಬಹುಮತ ಸಾಬೀತು ಪಡಿಸುವಂತೆ ಸಿಎಂಗೆ ಸೂಚನೆ ನೀಡುವ ಸಾಧ್ಯತೆ ಇದೆ.
- ಪರಿಸ್ಥಿತಿ ಇನ್ನಷ್ಟು ಕೈ ಮೀರಿದರೆ ಅಸೆಂಬ್ಲಿಯನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿಡಲು

### ಡಿಕೆಶಿಗೆ ಕ್ಯಾರೇ ಅನ್ನದ ರೆಬೆಲ್ಸ್

ಅತೃಪ್ತ ಶಾಸಕರನ್ನು ಮುಂಬಯಿಯಿಂದ ಕರೆ ತರುವುದಾಗಿ ಹೊರಟಿದ್ದ ಸಚಿವ ಡಿ.ಕೆ. ಶಿವಕುಮಾರ್ ಅವರು ಹಿನ್ನಡೆ ಅನುಭವಿಸಿದರು.



ಶಾಸಕರು ಶಿವಕುಮಾರ್ ಜತೆ ಮಾತುಕತೆಗೆ ನಿರಾಕರಿಸಿದ್ದರಿಂದ ಮತ್ತು ಅವರಿಂದ ಬೆದರಿಕೆ ಇದೆ ಎಂದು ದೂರು ನೀಡಿದ್ದರಿಂದ ಪೊಲೀಸರು ಹೋಟೆಲ್ ಪ್ರವೇಶಕ್ಕೆ ಅವಕಾಶ ನೀಡಲಿಲ್ಲ. ಅಲ್ಲಿ ಭಾರಿ ಹೈಡ್ರಾಮಾ ನಡೆದು ಡಿಕೆಶಿ ಅವರು ಸುಮಾರು 7 ಗಂಟೆ ಕಾಲ ಹೋಟೆಲ್ ಹೊರಗಡೆಯೇ ಕಾಯುತ್ತ ನಿಂತರು. ಅಂತಿಮವಾಗಿ ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡು ಸಂಜೆ ಬಳಿಕ ಬೆಂಗಳೂರಿಗೆ ಕಳುಹಿಸಿದ್ದಾರೆ.

### ಬಿಬಿಎಂಪಿ: 30 ದೋಸ್ತಿ ಕಾರ್ಪೊರೇಟರ್‌ಗಳು ಬಿಜೆಪಿ ಕಡೆಗೆ?

### ದೋಸ್ತಿ-ಬಿಜೆಪಿ ಪ್ರತಿಭಟನಾ ಸಮರ:

ಬಿರುಸುಗೊಂಡ ಕದನ ಯುದ್ಧ

ಗೋವಾದಲ್ಲೂ ಬಿಕ್ಕಟ್ಟು
15 ಕಾಂಗ್ರೆಸ್ ಶಾಸಕರಲ್ಲಿ 10 ಮಂದಿ ಬಿಜೆಪಿಗೆ »08

# ಕರ್ನಾಟಕಕ್ಕೆ ಕುರುಕ್ಷೇತ್ರ

» ಮೊದಲ ಪುಟದಿಂದ

ಮೂರನೇ ಮಹಡಿಯಲ್ಲಿರುವ ಸಚಿವ ಕೆ.ಜೆ. ಜಾರ್ಜ್ ಕಚೇರಿಯಲ್ಲಿ ಸುಧಾಕರ್ ಅವರನ್ನು ಕೂಡಿ ಹಾಕಲಾಗಿತ್ತು. ಅವರ ರಕ್ಷಣೆಗೆ ಧಾವಿಸಿದ ಬಿಜೆಪಿ ನಾಯಕರು ಮತ್ತು ಕಾಂಗ್ರೆಸ ಮುಖಂಡರ ನಡುವೆ ಭಾರಿ ವಾಗ್ವಾದ ಮತ್ತು ಕೈಕೈ ಮಿಲಾಯಿಸುವಿಕೆ ನಡೆಯಿತು.

ಸುಮಾರು ಎರಡು ಗಂಟೆಗಳ ಕಾಲ ಈ ಮಾರಾಮಾರಿ ನಡೆಯುತ್ತಿರುವಾಗಲೇ ಶಾಸಕ ಸುಧಾಕರ್ ಪತ್ನಿ ಹಾಗೂ ಕುಟುಂಬ ವರ್ಗ ರಾಜಭವನಕ್ಕೆ ತೆರಳಿ, ತಮ್ಮ ಪತಿಯನ್ನು ಕಾಂಗ್ರೆಸ್ ಮುಖಂಡರು ಅಪಹರಿಸಿ ಹಿಂಸೆ ನೀಡುತ್ತಿದ್ದಾರೆ ಎಂದು ದೂರು ನೀಡಿದರು. ಇದರಿಂದ ಕೆರಳಿದ

ಪೊಲೀಸ್ ಆಯುಕ್ತ ಅ
ಕುಮಾರ್‌ಗೆ ಕರೆ ಮಾಡಿ ಮು
ಹತ್ತು ನಿಮಿಷದೊಳಗಾಗಿ ಸು
ನ್ನು ರಕ್ಷಿಸಿ ತಮ್ಮ ಕಚೇರಿಗೆ ಕ
ಕೊಡುವಂತೆ ಸೂಚನೆ ನೀಡಿ
ಕವೇ ಪರಿಸ್ಥಿತಿ ತಿಳಿಗೊಂಡಿದೆ. ಅ
ಮೊದಲು ಬೆಳಗ್ಗೆ ಕಾಂಗ್ರೆಸ್-
ನವರು ಬಿಜೆಪಿ ವಿರುದ್ಧ
ನಡೆಸಿದರು. ರಾಜಭವನಕ್ಕೆ ಮು
ಹಾಕಲು ಮುಂದಾದ ಕೈನಾಯ
ಪೊಲೀಸರು ತಡೆದರು. ಮತ್ತೊ
ಬಿಜೆಪಿಯವರು ದೋಸ್ತಿಗಳ
ಧರಣಿ ನಡೆಸಿದರು.
ನಾಯಕರು ರಾಜ್ಯಪಾಲರು
ಸ್ಪೀಕರ್‌ರನ್ನು ಭೇಟಿಯಾದರು.